## ಸಿರಿತನದಲ್ಲಿ ಬಡತನ

**ಭಾ**ರತವನ್ನು ಬಡವರಿಂದ ಕೂಡಿದ ಶ್ರೀಮಂತ ರಾಷ್ಟ್ರ ಎಂದು ಕರೆಯುತ್ತಾರೆ. ಇತ್ತೀಚಿಗಿನ ವಿದ್ಯಮಾನಗಳನ್ನು ನೋಡಿದರೆ ಈ ಹೇಳಿಕೆ ಸತ್ಯಸ್ಯ ಸತ್ಯವಾಗಿ ಕಾಣುತ್ತದೆ. ಭಾರತದಲ್ಲಿ ಈಗ ಜಗತ್ತಿನಲ್ಲೇ ಅತಿ ಹೆಚ್ಚು ಧಾನ್ಯ ಸಂಗ್ರಹ ಇದೆಯಂತೆ. ಆದರೆ ಇದು ನಮಗೆ ಸಂತೋಷವನ್ನು ಉಂಟುಮಾಡುವುದಿಲ್ಲ. ಏಕೆಂದರೆ ಭಾರತದಲ್ಲಿ ಜಗತ್ತಿನಲ್ಲಿಯೇ ಅತಿ ಹೆಚ್ಚು ಜನ ಹಸಿದವರಿದ್ದಾರಂತೆ. ನೂರಾರು ಮಿಲಿಯಗಟ್ಟಳೆ ಜನರು ಹಸಿವಿನಿಂದ ನರಳುತ್ತಿದ್ದಾರೆ ಎಂದು ಕೇಳಿದರೆ ಆಶ್ಚರ್ಯವಾಗುತ್ತದೆ ಮತ್ತು ನಮ್ಮ ಅವ್ಯವಸ್ಥಿತ ಸಾಮಾಜಿಕ ಸ್ಥಿತಿಯನ್ನು ನೆನೆದು ನಾಚಿಕೆಯಾಗುತ್ತದೆ. ಹಾಲಿನ ಉತ್ಪಾದನೆಯಲ್ಲಿ ಭಾರತಕ್ಕೆ ಪ್ರಪಂಚದಲ್ಲೇ ಮೊದಲನೆಯ ಸ್ಥಾನ, ಹಾಗೂ ಗೋಧಿ ಮತ್ತು ಅಕ್ಕಿಯ ಉತ್ಪಾದನೆಯಲ್ಲಿ ಭಾರತಕ್ಕೆ ಎರಡನೆಯ ಸ್ಥಾನ. ಆದರೂ ಜನರಿಗೆ ತಿನ್ನಲು ಆಹಾರವಿಲ್ಲ! ಎಂಥ ವಿಪರ್ಯಾಸ! ಆಹಾರವಿದ್ದೂ ಹಸಿದವರಿಗೆ ಅದನ್ನು ನೀಡದಷ್ಟು ನಿಷ್ಕರುಣಿಗಳೇ ನಾವು? ಅಥವಾ ನೀಡಲಾಗದಷ್ಟು ಅಸಮರ್ಥರೇ?

ಅಧಿಕಾರಸ್ಥರಲ್ಲಿ ಜನಾನುರಾಗ ಸ್ವಲ್ಪವಾದರೂ ಇದ್ದಿದ್ದರೆ ಹೀಗಾಗಲು ಸಾಧ್ಯವಿತ್ತೆ? ತಮ್ಮ ಅಧಿಕಾರ ಲಾಲಸೆ, ಸ್ವಾರ್ಥಸಾಧನೆಗಳನ್ನು ಸ್ವಲ್ಪಮಟ್ಟಿಗಾದರೂ ಬಿಟ್ಟು ಜನರ ದುಃಸ್ಥಿತಿಯನ್ನು ಪರಿಭಾವಿಸುವ ಸಾಮರ್ಥ್ಯ ಅವರಿಗಿದ್ದಿದ್ದರೆ ಪರಿಸ್ಥಿತಿ ಇಷ್ಟು ಶೋಚನೀಯವಾಗಿರುತ್ತಿತ್ತೆ? ಅಧಿಕಾರಸ್ಥರು ಭಾರತವನ್ನು ಸೂಪರ್ ಪವರ್ ಮಾಡುವುದರಲ್ಲಿ ಅತ್ಯುತ್ಸಾಹಿಗಳಾಗಿದ್ದಾರೆ. ಈ ಬಡತನ, ಅನಕ್ಷರತೆ, ಹಿಂಸೆ, ಭ್ರಷ್ಟಾಚಾರ ಇತ್ಯಾದಿಗಳ ನಡುವೆ ನಾವು ಸೂಪರ್ ಪವರ್ ಎನಿಸಿಕೊಳ್ಳುವುದರಲ್ಲಿ ಯಾವ ಹೆಗ್ಗಳಿಕೆ ಇದೆ?

ತಪ್ಯಂತೇ ಲೋಕತಾಪೇನ ಸಾಧವಃ ಪ್ರಾಯಶೋ ಜನಾಃ ।
ಪರಮಾರಾಧನಂ ತದ್ಧಿ ಪುರುಷಸ್ಯಾಖಿಲಾತ್ಮನಃ ॥

"ದಯಾಳು ವ್ಯಕ್ತಿಗಳು ಜನರ ದುಃಖದಿಂದ ದುಃಖಿಕ್ಕೊಳಗಾಗುತ್ತಾರೆ. ಇದೇ ಎಲ್ಲರ ಆತ್ಮನಾಗಿರುವ ಪುರುಷನ ಶ್ರೇಷ್ಠ ಆರಾಧನೆ," ಎಂದು ಭಾಗವತ ಮಹಾಪುರಾಣ ಹೇಳುತ್ತದೆ. ಅಧಿಕಾರಸ್ಥರಲ್ಲಿ ಕೆಲವರಾದರೂ ಇಂತಹ ದಯಾಳುಗಳಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಪ್ರತಿದಿನ ದೇವಾಲಯಕ್ಕೆ ಹೋಗುವವರು ಭಾಗವತದಲ್ಲಿ ಹೇಳಿರುವಂತೆ, ನಿಜವಾದ ಭಗವದಾರಾಧನೆ ಏನೆಂಬುದನ್ನು ಅರ್ಥಮಾಡಿಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಶ್ರೀಮಂತ ವ್ಯಾಪಾರಕೇಂದ್ರಗಳಾದ ದೇವಾಲಯಗಳಲ್ಲಿ ಹಣ ಸುರಿಯುವ ಬದಲು ಜನಸೇವೆಗೆ ಅದನ್ನು ಬಳಸಿದರೆ ಎಷ್ಟು ಚೆನ್ನಾಗಿರುತ್ತಿತ್ತು! ಜನರು ತಿರುಪತಿಯಲ್ಲಿ ಹಣಕೊಟ್ಟು ಕೂದಲನ್ನು ಕೊಟ್ಟುಬರುತ್ತಾರೆ. ಆ ಕೂದಲ ಮಾರಾಟದಿಂದ ಪ್ರತಿವರ್ಷ ತಿರುಪತಿ ದೇವಾಲಯದವರು ರೂ. ೨೦ ಕೋಟಿ ಗಳಿಸುತ್ತಾರಂತೆ! ಈ ಕೇಶವ್ಯಾಪಾರಿಗಳಿಗೆ ಬಡವರ ಕ್ಲೇಶದ ಬಗ್ಗೆ ಸ್ವಲ್ಪವಾದರೂ ಕಳಕಳಿ ಬೇಡವೇ? **ಶ್ರೀಮಂತರಾಗುವ ಈ ಪೈಪೋಟಿಯಲ್ಲಿ ಬಡವರನ್ನು ಕೇಳುವವರಾರು?** ◆

## ಸಂತೋತ್ಪಾದನೆ

**ಇ**ತ್ತೀಚೆಗೆ ಮದರ್ ಥೆರೇಸಾ ಅವರ ಬೀಟಿಫಿಕೇಷನ್ (ದಿವ್ಯಪದವಿಗೇರಿಸುವುದು) ದೊಡ್ಡ ಸುದ್ದಿಯಾಗಿದೆ. ಇದು ಸಂತೀಕರಣದ ಮೊದಲನೆಯ ಹಂತ. ಇಂದಿನ ಪೋಪರಿಗೆ ಸಂತೀಕರಣದಲ್ಲಿ ಅತ್ಯುತ್ಸಾಹ ಇರುವಂತೆ ಕಂಡುಬರುತ್ತಿದೆ. ಇವರು ಸೃಷ್ಟಿಸಿದ ಸಂತರ ಸಂಖ್ಯೆ ಹಿಂದಿನ ಎಲ್ಲ ಪೋಪರು ಸೇರಿ ಸೃಷ್ಟಿಸಿದ ಸಂತರ ಸಂಖ್ಯೆಯನ್ನೂ ಮೀರಿಸುತ್ತದಂತೆ. ೧೯೭೮ ಮತ್ತು ೧೯೯೯ರ ಅವಧಿಯಲ್ಲಿ ೨೮೩ ಸಂತರನ್ನು ಮಾಡಿದ್ದಾರೆ. ಈಗ ಅದು ೪೭೭ಕ್ಕೆ ಏರಿದೆಯಂತೆ! ಈ ರೀತಿ ಮೃತ್ಯುವಿನ ಎಷ್ಟೋ ವರ್ಷಗಳನಂತರ ಒಬ್ಬ ವ್ಯಕ್ತಿಯನ್ನು ಪದವಿಗೇರಿಸುವುದರ ಅರ್ಥವೇನು? ಜೀವನದಲ್ಲಿ ಸಂತರಾಗಿಲ್ಲದವರು ಮರಣಾನಂತರ ಸಂತರಾದರೆ ಪ್ರಯೋಜನವೇನು? ಯಾವುದೋ ಒಂದು ಸಂದೇಹಾಸ್ಪದ ಪವಾಡದಿಂದ ಒಬ್ಬನು ಸಂತನಾಗಿಬಿಡುತ್ತಾನೆಯೆ?

ಶ್ರೀಶಂಕರಾಚಾರ್ಯರು ಹೇಳುತ್ತಾರೆ :

ಶಾಂತಾ ಮಹಾಂತೋ ನಿವಸಂತಿ ಸಂತೋ
ವಸಂತವಲ್ಲೋಕಹಿತಂ ಚರಂತಃ ।
ತೀರ್ಣಾಃ ಸ್ವಯಂ ಭೀಮಭವಾರ್ಣವಂ ಜನಾನ್
ಅಹೇತುನಾಽನ್ಯಾನಪಿ ತಾರಯಂತಃ ॥

"ಭಯಂಕರ ಸಂಸಾರಸಾಗರವನ್ನು ತಾವು ದಾಟಿ, ಯಾವ ನಿಮಿತ್ತವೂ ಇಲ್ಲದೆ ಇತರ ಜನರನ್ನೂ ದಾಟಿಸುವ ಶಾಂತರೂ ಮಹನೀಯರೂ ಆದ ಸತ್ಪುರುಷರು ವಸಂತ ಋತುವಿನಂತೆ ಲೋಕಕಲ್ಯಾಣವನ್ನು ಮಾಡುತ್ತಾ ಇರುತ್ತಾರೆ."

ಜೀವಿತಕಾಲದಲ್ಲೇ ಇಂತಹ ಜೀವನವನ್ನು ನಡೆಸುವವರು ಸಂತರು, ಸತ್ತಮೇಲೆ ಪವಾಡವನ್ನು ಮಾಡುವವರಲ್ಲ. ಜನರು ಸಂತರನ್ನು ಗುರುತಿಸಿ ಪೂಜಿಸುವಂತಿರಬೇಕೇ ಹೊರತು, ಯಾವುದೋ ಧಾರ್ಮಿಕ ಅಧಿಕಾರ ಸಂತರೆಂದು ಘೋಷಿಸುವುದಲ್ಲ. ಈ ರೀತಿ ಘೋಷಿಸಲ್ಪಟ್ಟ ಎಷ್ಟೋ ಸಂತರು ಜೀವಿತಕಾಲದಲ್ಲಿ ಅತ್ಯಂತ ಅನೈತಿಕ ಜೀವನವನ್ನು ನಡೆಸಿರುವವರು. ಗೋವಾದ ಸುಪ್ರಸಿದ್ಧ ಸಂತ ಕ್ಸೇವಿಯರ್ ಇಂಕ್ವಿಸಿಷನ್ ಮೂಲಕ ನಡೆಸಿದ ಹತ್ಯಾಕಾಂಡ ಎಂಥ ಕ್ರೂರಿಯನ್ನೂ ಚಕಿತಗೊಳಿಸುತ್ತದೆ. ಇಂತಹ ಸಂತರ ಪೀಳಿಗೆಯನ್ನು ಪಡೆದಿರುವ ಧರ್ಮ ಜಗತ್ತಿನಲ್ಲೇ ಶ್ರೇಷ್ಠವಾದುದಂತೆ ಮತ್ತು ಅದರ ಮೂಲಕ ಮಾತ್ರ ಉದ್ಧಾರವಂತೆ! ಎಂಥ ವಿಪರ್ಯಾಸ !

ಎಲ್ಲ ಧರ್ಮಗಳಲ್ಲೂ ಸಂತರಿಗೆ ಇರುವ ವಿಶೇಷ ಸ್ಥಾನವನ್ನು ಯಾರೂ ಅಲ್ಲಗಳೆಯಲಾರರು. ಆದರೆ ಅಂತಹ ಸಂತಪದವಿಗೇರುವುದು ಒಂದು ಯಾಂತ್ರಿಕ ಪ್ರಕ್ರಿಯೆಯಾದಾಗ ಉಂಟಾಗಬಹುದಾದ ಗೊಂದಲವೂ ಅಗಾಧವೇ. ಒಂದು ಸಂಪ್ರದಾಯದ ಸಂತರ ಅಥವಾ ಧರ್ಮಗುರುಗಳ ಮಾತುಗಳನ್ನು ಭಗವಂತನ ವಾಣಿಯೆಂದೇ ಆ ಧರ್ಮದ ಅನುಯಾಯಿಗಳು ಬಗೆಯುತ್ತಾರೆ. ಜನತೆಯ ಈ ವಿಶ್ವಾಸವನ್ನು ಗಳಿಸಿರುವ ಇಂತಹ ಸ್ಥಾನ ಎಷ್ಟು ಜವಾಬ್ದಾರಿಯುತವಾದುದೆಂದು ಬೇರೆ ಹೇಳಬೇಕಾಗಿಲ್ಲ. ◆